ಈಗ ಳ ಗ್ರಾಮಂದ ಜನರು ರಸ್ತೆ ರೋಕೋ ಚಳುವಳಿಯನ್ನು ಪ್ರಾರಂಭಿಸುವಂತೆ ತೀರ್ಮಾನ ಮಾಡಿ ನನಗೆ ತಿಳುವಳಿಕೆ ಕೊಟ್ಟಿದ್ದಾರೆ. ದಿನಾಂಕ ೨೨ ರೊಳಗೆ ಪ್ರಾರಂಭ ಮಾಡಲು ಕೋರಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೂಡಲೇ ಒಂದು ಬಸ್ಸನ್ನು ಓಡಿಸಲು ಪ್ರಾರಂಭ ಮಾಡಬೇಕೆಂದು ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಸಚಿವರು). — ಮಾನ್ಯ ಅಧ್ಯಕ್ಷರೇ ಬಿಳಿಗೆರೆಯಿಂ ಮಡಿಕೇರಿಯಿಂದ ಸುಮಾರು ೨೫ ಕಿ. ಮೀ. ದೂರದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಯಾಣಿಕರ ಸಾರಿಗೆಯ ವ್ಯವಸ್ಥೆ ರಾಷ್ಟ್ರೀಕರಣವಾಗಿರುವುದಿಲ್ಲ. ಬಿಳಿಗೇರಿ–ಮಡಿಕೇರಿ ಮಾರ್ಗವು ಖಾಸಗೀ ವಾಹನದ ಓಡಾಟದ ವ್ಯಾಪ್ತಿಯಲ್ಲಿರುತ್ತದೆ. ಮಡಿಕೇರಿ–ಸೋಮವಾರಪೇಟೆ ರಸ್ತೆಯಲ್ಲಿ ತಾಕೇರಿ ಎಂಬಲ್ಲಿಂದ ಮುಂದಕ್ಕೆ ಒಳ್ಳೆಯ ರಸ್ತೆಯಿಲ್ಲ. ಈ ಬಗ್ಗೆ ರಸ್ತೆಯು ಮಳೆಗಾಲದಲ್ಲಿ ಬಸ್ ಸಂಚಾರಕ್ಕೆ ಅನುಕೂಲವಾಗಿರುವುದಿಲ್ಲ. ಆಗ ಖಾಸಗೀ ವಾಹನಗಳೂ ಸಹ ಸಂಚರಿಸುವುದಿಲ್ಲ.

ಶ್ರೀ ರಾಮಪ್ಪ.— ಮಾವನ ಮನೆಗೆ ಕೇಳಿದರೆ ಅಳಿಯನ ಮನೆಗೆ ಕೊಟ್ಟಿದ್ದಾರೆ.

ಶ್ರೀ ಎಂ ರಘುಪತಿ. — ರಸ್ತೆ ಸಮೀಕ್ಷೆ ನಡೆಸಿ ವಾಹನ ಓಡಿಸುವ ಬಗ್ಗೆ ಸೂಕ್ತಕ್ರಮ ತೆಗೆದುಕೊಳಲಾಗುವುದು. ರಸ್ತೆ ಸರಿಯಿಲ್ಲವಾದ ಕಾರಣ ಬಸ್ ಓಡಾಡುತ್ತಿಲ್ಲ. ಈ ಬಗ್ಗೆ ಸಾರಿಗೆ ಸಚಿವರಿಗೆ ಹೇಳಿ ಸೂಕ್ತ ವಿಪರ್ಾಡು ಮಾಡಿಸುತ್ತೇನೆ.

೯) ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಉರ್ದು ಪೀಠದ ಸ್ಥಾಪನೆ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಉರ್ದು ಪೀಠವನ್ನು ಸ್ಥಾಪಿಸುವ ವಿಷಯ ಬಹಳ ಕಾಲದಿಂದಲೂ ಹಾಗೆಯೇ ಉಳಿದಿದೆ. ವಿಶ್ವ ವಿದ್ಯಾನಿಲಯದವರು ಉರ್ದು ಭಾಷೆಯ ಬೆಳವಣಿಗೆ ಹಾಗೂ ಉರ್ದು ಭಾಷೆಯ ಬಗ್ಗೆ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸುವ ಸಲುವಾಗಿ ಉರ್ದು ಪೀಠವನ್ನು ಸ್ಥಾಪಿಸುವ ಬಗ್ಗೆ ೫ ಲಕ್ಷ ರೂಪಾಯಿಗಳನ್ನು ನೀಡುವಂತೆ ಸರ್ಕಾರವನ್ನು ಕೋರಿದ್ದಾರೆ. ಆ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ಕೈ ಕೊಂಡಿಲ್ಲ. ಆದ್ದರಿಂದ ಸರಕಾರ ಕೂಡಲೇ ಐದು ಲಕ್ಷ ರೂಪಾಯಿಗಳನ್ನು ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಕೂಡಲೇ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇವೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಸದಸ್ಯರ ಸಲಹೆಯನು ಸರ್ಕಾರ ಪರಿಶೀಲನೆ ಮಾಡುತ್ತದೆ.

೧೦) ಉಡುಪಿ ಮಲ್ಪೆ ಪ್ರಾಧಿಕಾರದ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್ —ಮಾನ್ಯ ಅಧ್ಯಕ್ಷರೇ, ಉಡುಪಿ–ಮಲ್ಪೆ ಪ್ರಾಧಿಕಾರದ ಕಥೆ–ಇದು ಪರಿಸರದ ಜನಕ್ಕೆಲ್ಲ ಮಾನ ಇದರ ಕಾರ್ಯ ನಿರ್ವಹಣೆ ವರವಾಗಿಂತ ಬದಲು ಶಾಪವಾಗಿ ಪರಿಣಮಿಸಿದೆ. ಹಿಂದಿನ ಸರ್ಕಾರದ ಕಾಲದಲ್ಲಿ ಒಂದು ಮನೆ ಕಟ್ಟಲು ರೂ. ಹತ್ತು ಶುಲ್ಕ ವಿಧಿಸಂತಿದ್ದರೆ ಈಗ ರೂ. ೫೦೦–ರಿಂದ ರೂ. ೨೦೦೦ ದ ವರೆಗೆ ಶುಲ್ಕದ ಹೇರಿಕೆ. ಮಂಜೂರಾದ ಲೇ–ಔಟ್‌ಗಳಲ್ಲಿ ಮನೆ ಕಟ್ಟಲು ಅನುಮತಿ ಕೇಳಿದಾಗ ನಿರಾಕರಣೆ, ಪಾರ್ಕಿಂಗ್ ಜಾಗ ಇರಿಸಲಿ, ಸೆಟ್ ಬ್ಯಾಕ್ ಇಲ್ಲದೆ, ಟಾನಾ ಪ್ಲಾನಿಂಗ್ ನಿಯಮದ ವಿರುದ್ಧ ಕಟ್ಟಡದ ರಚನೆ, ಒಂದೇ ಭಾಗದಲ್ಲಿ ಲೇ ಔಟ್ ಮಂಜೂರಾತಿಗೆ ಒಬ್ಬೊಬ್ಬರಿಗೆ ಒಂದೊಂದು ನಿಯಮ. ಅಧಿಕಾರಿ ಒಲಿದರೆ ೨೦ ಅಡಿ ಬಲಿಸಿಕೊಳ್ಳಲಾಗದಿದ್ದರೆ ೩೦ ಅಡಿ ದೂರದಲ್ಲಿ ಮನೆ ಕಟ್ಟಬೇಕು–ರಸ್ತೆಯ ಬಿದಿಯಿಂದ ಡ್ರೈನೇಜ್ ಇಲ್ಲದೆ ಬೋರ್ಡಿಂಗ್–ಲಾಡ್ಜಿಂಗ್ ಕಟ್ಟಡದ ರಚನೆಗೆ ಅನುಮತಿ, ೩ ಸೆಂಟ್ಸ್ ಮನೆ ಜಾಗ ಸರ್ಕಾರದಿಂದ ಸಿಕ್ಕಿದ ಬಡವರೂ ಅನುಮತಿಗಾಗಿ ೩ ತಿಂಗಳು ಕಾಯಬೇಕಾದ ಪರಿಸ್ಥಿತಿ–ಈಚೆಗಂತೂ ಪ್ರಾಧಿಕಾರ ಸಮಿತಿಯನ್ನೇ ರದ್ದು ಮಾಡಿ, ಹೊಸ ಸಮಿತಿಯನ್ನು ನೇಮಕ ಮಾಡದಿರುವುದು–ಇದು ಪ್ರಾಧಿಕಾರದ ಪ್ರಾರಬ್ಧದ ಕಥೆ. ಜನಸಾಮಾನ್ಯರಿಗಾದ ಅನ್ಯಾಯದ ವ್ಯಥೆ ಈ ಕವಿತೆ ಕೂಡಲೇ ತನಿಖೆ ನಡೆಸಬೇಕು, ಪ್ರಾಧಿಕಾರದ ನೇಮಕ ಆಗುವ ತನಕ ಮಂಜೂರಾತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗಾದರೂ ನೀಡಬೇಕು. ಅದಕ್ಕಿಂತಲೂ ನನ್ನ ಸೂಚನೆ ಎಂದರೆ, ಪ್ರಾಧಿಕಾರವಿಲ್ಲ ಅಧಿಕಾರ